ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 08-04-1992.

# *ಬ್ರಹ್ಮಾತಂದೆಯೊಂದಿಗಿನ ಪ್ರೀತಿಯ ಚಿಹ್ನೆಯಾಗಿದೆ- ಅವ್ಯಕ್ತ ಫರಿಶ್ತಾ ಆಗುವುದು*

(ब्रह्मा बाप से प्यार की निशानी है - अव्यक्त फरिश्ता बनना)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಅವ್ಯಕ್ತ ಬಾಪ್‌ದಾದಾ ತನ್ನ ಆದಿರಚನೆ ಆತ್ಮರೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ಬೇಹದ್ದಿನ ತಂದೆ ತಮ್ಮ ಆದಿ ಶ್ರೇಷ್ಠ ಡೈರೆಕ್ಟ್ ರಚನೆಯನ್ನು ನೋಡುತ್ತಿದ್ದಾರೆ. ಬ್ರಾಹ್ಮಣ ಆತ್ಮರು ಡೈರೆಕ್ಟಾಗಿ ಶಿವವಂಶಿ ಬ್ರಹ್ಮಕುಮಾರ ಕುಮಾರಿಯರಾಗಿದ್ದಾರೆ. ಬ್ರಾಹ್ಮಣ ಆತ್ಮರು ಆದಿದೇವನ ಆದಿ ರಚನೆಯಾಗಿದ್ದೀರಿ. ಆದ್ದರಿಂದ ಕಲ್ಪವೃಕ್ಷದಲ್ಲಿ ಬ್ರಾಹ್ಮಣರನ್ನು ಫೌಂಡೇಶನ್ ಅರ್ಥಾಥ್ ಬುಡದಲ್ಲಿ ತೋರಿಸಿದ್ದಾರೆ. ತಮ್ಮ ಸ್ಥಾನವನ್ನು ನೋಡಿದ್ದೀರಲ್ಲವೇ ವೃಕ್ಷದಲ್ಲಿ ತಾವು ಆದಿ ರಚನೆಯನ್ನು ಬೀಜದ ಸಮೀಪ ಬುಡದಲ್ಲಿ ತೋರಿಸಲಾಗಿದೆ. ಆದ್ದರಿಂದ ಡೈರೆಕ್ಟ್ ರಚನೆಯಾಗಿದ್ದೀರಿ ಅನ್ಯ ಆತ್ಮರು ಡೈರೆಕ್ಟಾಗಿ ಮಾತಾಪಿತರ (ಶಿವತಂದೆ ಮತ್ತು ಬ್ರಹ್ಮತಾಯಿ) ಡೈರೆಕ್ಟ್ ಪರಮಾತ್ಮನ ರಚನೆಯಲ್ಲ. ತಾವು ಡೈರೆಕ್ಟ್ ರಚನೆಗೆ ಎಷ್ಟು ಮಹತ್ವಿಕೆ ಇದೆ. ಡೈರೆಕ್ಟ್ ಬೀಜದ ಜೊತೆ ಸಂಬಂಧವಿದೆ. ಉಳಿದೆಲ್ಲರದು ಇನ್‌ಡೈರೆಕ್ಟ್ ಸಂಬಂಧವಿದೆ. ತಮ್ಮದು ಡೈರೆಕ್ಟ್ ಆಗಿದೆ. ತಾವೆಲ್ಲರೂ ಆತ್ಮಿಕ ನಶೆಯಿಂದ ಹೇಳುತ್ತೀರಿ- ನಾವು ಪರಮಾತ್ಮನ ಸಂತಾನರಾಗಿದ್ದೇವೆ ಎಂದು ಯಾವುದೆಲ್ಲಾ ಧರ್ಮದ ಆತ್ಮರು ಬರುತ್ತಾರೆಯೋ ಅವರೆಲ್ಲರೂ ತಮ್ಮನ್ನು ಕ್ರಿಶ್ಚಿಯನ್, ಬೌದ್ಧ, ಇಸ್ಲಾಮಿಗಳೆಂದು ಕರೆಸಿಕೊಳ್ಳುತ್ತಾರೆ. ಡೈರೆಕ್ಸ್ ಶಿವವಂಶಿ ಅಥವಾ ಆದಿದೇವ ಬ್ರಹ್ಮನ ರಚನೆಯೆಂದು ಕರೆಸಿಕೊಳ್ಳುವುದಿಲ್ಲ. ಕ್ರೈಸ್ಟ್‌ವಂಶಿ ಕ್ರಿಶ್ಚಿಯನ್ನರು ಹೇಳುತ್ತಾರೆ- ನಾವು ಧರ್ಮಪಿತ ಕ್ರೈಸ್ಟ್‌ನ ಕ್ರಿಶ್ಚಿಯನ್ನರಾಗಿದ್ದೇವೆ ಎಂದು. ಅವರು ಇದನ್ನೂ ತಿಳಿದುಕೊಂಡಿರುತ್ತಾರೆ- ಅವರೆಲ್ಲರೂ ಧರ್ಮಪಿತನ ವಂಶದವರಾಗಿದ್ದಾರೆ ಮತ್ತು ನಾವು ಪರಮಾತ್ಮನ ವಂಶಸ್ಥರೆಂದು ಹೇಳುತ್ತೀರಿ ಅಂದಾಗ ಧರ್ಮಪಿತರೆಲ್ಲಿ! ಪರಮಪಿತನೆಲ್ಲಿ! ಎಷ್ಟೊಂದು ಅಂತರವಿದೆ! ಡಬಲ್ ವಿದೇಶಿಯರು ಏನೆಂದು ತಿಳಿಯುತ್ತೀರಿ- ಪರಮಪಿತನ ವಂಶಸ್ಥರಾಗಿದ್ದೀರೋ ಅಥವಾ ಧರ್ಮಪಿತರ ವಂಶಸ್ಥರಾಗಿದ್ದೀರೋ? ಪರಮಪಿತನ ವಂಶಸ್ಥರಾಗುವುದು ಎಂದರೆ ಡೈರೆಕ್ಟ್ ರಚನೆಯಾಗುವುದು ಅಂದಮೇಲೆ ಡೈರೆಕ್ಟ್ ಮತ್ತು ಇನ್‌ಡೈರೆಕ್ಟ್ ನಲ್ಲಿ ಎಷ್ಟೊಂದು ಅಂತರವಿದೆ. ನಶೆಯಲ್ಲಿಯೂ ಅಂತರವಿದೆ ಮತ್ತು ಪ್ರಾಪ್ತಿಯಲ್ಲಿಯೂ ಅಂತರವಿದೆ. ಆದ್ದರಿಂದ ಭಕ್ತಿಮಾರ್ಗದಲ್ಲಿಯೂ ಇನ್‌ಡೈರೆಕ್ಟ್ ತನ್ನ ಇಷ್ಟದೇವ-ದೇವಿಯರ

ಮೂಲಕ ತಂದೆಯನ್ನು ನೆನಪು ಮಾಡುತ್ತಾರೆ. ಒಂದುವೇಳೆ ಯಾರಾದರೂ ಶಿವನ ಭಕ್ತರಾಗಿದ್ದರೂ ಸಹ ಅವರೂ ಶಿವ-ಶಂಕರ ಒಂದೇ ಎಂದು ತಿಳಿದು ನೆನಪು ಮಾಡುತ್ತಾರೆ ಅಂದಮೇಲೆ ಇದು ಇನ್‍ಡೈರೆಕ್ಟ್ ಆಯಿತಲ್ಲವೆ. ರಾಮನಿಗೂ ರಾಮೇಶ್ವರನಿದ್ದಾರೆ ಎಂಬುದೂ ಗೊತ್ತಿದೆ ಆದರೂ ರಾಮನನ್ನೇ ನೆನಪು ಮಾಡುತ್ತಾರೆ. ಅಂದಮೇಲೆ ಭಕ್ತಿಯು ಇನ್‍ಡೈರೆಕ್ಟ್ ಆಯಿತಲ್ಲವೆ ಏಕೆಂದರೆ ಭಕ್ತಾತ್ಮರ ರಚನೆಯೂ ಸಹ ಕೊನೆಯ ಆತ್ಮನಾಗಿದ್ದಾರೆ. ತಾವು ಡೈರೆಕ್ಟ್ ಪರಮಾತ್ಮವಂಶಿ ಆತ್ಮರಾಗಿದ್ದೀರಿ. **ದ್ವಾಪರದಲ್ಲಿ ಭಕ್ತಿಯನ್ನೂ ಮಾಡುತ್ತೀರಿ ಅಂದಾಗ ಪರಿಚಯವಿಲ್ಲದಿದ್ದರೂ ಮೊದಲು ಶಿವತಂದೆಯ ಭಕ್ತಿಯನ್ನೇ ಮಾಡುತ್ತೀರಿ.** ಬ್ರಹ್ಮಾ- ವಿಷ್ಣು-ಶಂಕರ, ಈ ಸೂಕ್ಷ್ಮ ದೇವತೆಗಳ ಪೂಜೆಯು ನಂತರದಲ್ಲಿ ಆರಂಭವಾಗುತ್ತದೆಯೇ ಹೊರತು ಆದಿಯಲ್ಲಿ ಅಲ್ಲ ಅಂದಾಗ ಅನ್ಯಆತ್ಮರ ರಚನೆಯು ಇನ್‍ಡೈರೆಕ್ಟ್ ಆತ್ಮರ ಮೂಲಕ ಆಗಿದೆ ಮತ್ತು ಭಕ್ತಿಯಲ್ಲಿಯೂ ಇನ್‍ಡೈರೆಕ್ಟ್ ಭಕ್ತಿಯಾಗಿದೆ. ತಾವು ಡೈರೆಕ್ಟ್ ಭಕ್ತರಾಗಿದ್ದೀರಿ. ಇನ್‍ಡೈರೆಕ್ಟ್ ಅಲ್ಲ ಅರ್ಥಾತ್ ಶಿವನ ಪೂಜೆಯನ್ನೇ ಆರಂಭಿಸುತ್ತೀರಿ.

ಪ್ರಾಪ್ತಿಯಲ್ಲಿಯೂ ನೋಡಿ- ತಾವು ಡೈರೆಕ್ಟ್ ಆತ್ಮರು ಅರ್ಥಾತ್ ಡೈರೆಕ್ಟ್ ರಚನೆಗೆ ಅನೇಕ ಜನ್ಮಗಳಿಗಾಗಿ ಜೀವನ್ಮುಕ್ತಿಯ ಆಸ್ತಿಯು ಸಿಗುತ್ತದೆ. ಅನ್ಯಆತ್ಮರಿಗೆ ಇಷ್ಟು ಸಮಯದ ಜೀವನ್ಮುಕ್ತಿಯ ಆಸ್ತಿಯು ಸಿಗುವುದಿಲ್ಲ. ತಮ್ಮ ಜೀವನ್ಮುಕ್ತಿಯು ಅರ್ಧಕಲ್ಪ ನಡೆಯುತ್ತದೆ ಮತ್ತು ಅನ್ಯಆತ್ಮರಿಗೂ ಜೀವನ್ಮುಕ್ತಿ ಮತ್ತು ಜೀವನಬಂಧನ ಎರಡೂ ಅರ್ಧಕಲ್ಪದಲ್ಲಿಯೇ ಸಿಗುತ್ತದೆ ಅದೂ ದ್ವಾಪರದ ಆದಿಯ ಆತ್ಮರಿಗೆ, ಕೊನೆಯ ಆತ್ಮರಿಗಂತೂ ಕೆಲವೇ ಜನ್ಮಗಳಲ್ಲಿಯೂ ಎರಡೂ ಪ್ರಾಪ್ತಿಯಾಗುತ್ತದೆ ಮತ್ತು ವಿಶೇಷತೆಯು ಇದೇ ಆಗಿದೆ- ತಮ್ಮದು ಜೀವನ್ಮುಕ್ತಿ ಅರ್ಥಾತ್ ಸತೋಪ್ರಧಾನ ಸ್ಥಿತಿ (ಸ್ವರ್ಣಿಮ ಹಾಗೂ ಬೆಳ್ಳಿಯ ಸಮಾನ ಸ್ಥಿತಿ)ಯು ಚಕ್ರದ ಸ್ವರ್ಣಿಮ ಹಾಗೂ ಬೆಳ್ಳಿಯ ಯುಗದಲ್ಲಿಯೇ ಪ್ರಾಪ್ತಿಯಾಗುತ್ತದೆ. ತಮ್ಮದು ಸತೋಪ್ರಧಾನತೆಯಿದ್ದಾಗ ಯುಗವೂ ಸ್ವರ್ಣಿಮ ಅರ್ಥಾತ್ ಸತೋಪ್ರಧಾನವಾಗಿರುತ್ತದೆ. ಪ್ರಕೃತಿಯೂ ಸತೋಪ್ರಧಾನವಾಗಿರುತ್ತದೆ. ಚಕ್ರವನ್ನು ಚೆನ್ನಾಗಿ ತಿಳಿದುಕೊಂಡಿದ್ದೀರಲ್ಲವೆ ಮತ್ತು ಅನ್ಯಆತ್ಮರದು ಸತೋಪ್ರಧಾನ ಸ್ಥಿತಿಯಿದ್ದಾಗ ಯುಗವು ತಾಮ್ರದ ಯುಗ ಅಥವಾ ಕಬ್ಬಿಣದ ಯುಗ (ದ್ವಾಪರ-ಕಲಿಯುಗ) ವಾಗಿರುತ್ತದೆ. ತಾಮ್ರದ ಯುಗದಲ್ಲಿ ಅವರದು ಸತೋಪ್ರಧಾನ ಸ್ಥಿತಿಯಿರುತ್ತದೆ ಮತ್ತು ತಮ್ಮದು ಸ್ವರ್ಣಿಮ ಯುಗದಲ್ಲಿಯೇ ಸ್ವರ್ಣಿಮ ಸ್ಥಿತಿ ಅರ್ಥಾತ್ ಸತೋಪ್ರಧಾನ ಸ್ಥಿತಿಯಾಗಿರುತ್ತದೆ ಅಂದಮೇಲೆ ಎಷ್ಟೊಂದು ಅಂತರವಾಯಿತು! ತಾವು ಸತೋಪ್ರಧಾನರಾಗಿದ್ದಾಗ ಪ್ರಕೃತಿಯೂ ಸತೋಪ್ರಧಾನವಾಗಿರುತ್ತದೆ. ಅವರು ರಜೋಪ್ರಧಾನ ಪ್ರಕೃತಿಯಲ್ಲಿ ಸತೋಪ್ರಧಾನ ಸ್ಥಿತಿಯ ಅನುಭವ ಮಾಡುತ್ತಾರೆ ಅಂದಾಗ ಡೈರೆಕ್ಟ್ ಮತ್ತು ಇನ್‍ಡೈರೆಕ್ಟ್ ರಚನೆಗೆ ಎಷ್ಟೊಂದು ಅಂತರವಿದೆ! ನಾವು ಡೈರೆಕ್ಟ್ ಪರಮಾತ್ಮನ ರಚನೆಯಾಗಿದ್ದೇವೆ ಎಂಬ ನಶೆಯಿದೆಯೇ? ಸದಾ ನಶೆಯಿರುತ್ತದೆಯೋ ಅಥವಾ ಕೆಲಕೆಲವೊಮ್ಮೆ ನಶೆಯಿರುತ್ತದೆಯೋ? ಪರ್ಸೆಂಟೇಜಿನಲ್ಲಿ ಅಂತರವಾಗಿಬಿಡುತ್ತದೆ. ಕೆಲವೊಮ್ಮೆ 100% ಇದ್ದರೆ ಕೆಲವೊಮ್ಮೆ 50% ಇರುತ್ತದೆ ಆದರೆ ವಾಸ್ತವದಲ್ಲಿ ಹೇಗಿರಬೇಕು? ಸದಾ ಇರಬೇಕಲ್ಲವೆ ಅಂದಾಗ ಇನ್ನೂ ಬೇಕು ಬೇಕು ಎಂಬುದನ್ನು ಎಲ್ಲಿಯತನಕ ಹೇಳುತ್ತೀರಿ? ಸದಾ ನಶೆಯಿರುತ್ತದೆ ಎಂಬ ಮಾತನ್ನು ಯಾರೂ ಹೆಮ್ಮೆಯಿಂದ ಹೇಳುವುದಿಲ್ಲ. ಇನ್ನೂ ಇರಬೇಕು ಎಂದು ಹೇಳುತ್ತೀರಿ ಅಂದಾಗ ಸಂಪೂರ್ಣರಾಗುವುದು ಎಂದರೆ ಈ ಬೇಕು ಎಂಬ ಶಬ್ದವು ಸಮಾಪ್ತಿಯಾಗಲಿ. ಎಲ್ಲರ ಬಾಯಿಂದ ಸದಾ ಎನ್ನುವ ಶಬ್ದವು ಹೊರಡಲಿ, ಅದಕ್ಕಾಗಿ ಇನ್ನೆಷ್ಟು ವರ್ಷಗಳು ಬೇಕು? ತಂದೆಯೂ ಕೇಳುತ್ತಾರೆ- ಎಷ್ಟು ವರ್ಷಗಳು ಬೇಕು? 10 ವರ್ಷಗಳು ಬೇಕೇ ಅಥವಾ ಅದಕ್ಕಿಂತಲೂ ಹೆಚ್ಚು ಅಥವಾ ಕಡಿಮೆ ಬೇಕೊ? ಏಕೆಂದರೆ ತಪಸ್ಯಾ ವರ್ಷವನ್ನು ಆರಂಭ ಮಾಡಿದಿರಿ. ಈಗಂತೂ ಸಮಾಪ್ತಿಯ ಸಮಯವು ಬಂದುಬಿಟ್ಟಿತು ಆದರೆ ನೀವೆಲ್ಲರೂ ಆರಂಭಿಸಿದಾಗ ಯಾವ ಸಂಕಲ್ಪ ಮಾಡಿದಿರಿ? ಸಂಪನ್ನರಾಗಿಬಿಡುತ್ತೇವೆ ಎಂದೇ ಆಲೋಚಿಸಿದಿರಲ್ಲದೆ? ವರ್ಷವಂತೂ ಸಮಾಪ್ತಿಯಾಯಿತು ಆದರೆ ತಾವು ಸಂಪನ್ನರಾಗಿಬಿಟ್ಟಿದ್ದೀರಾ ಅಥವಾ ಆಗಬೇಕಾಗಿದೆಯೇ? ಇನ್ನೂ ಕೆಲವು ವರ್ಷಗಳು ಬೇಕಾಗಿದೆಯೇ? ಅನ್ಯರಿಗಾದರೆ ಚಾಲೆಂಜ್ ಮಾಡುತ್ತೀರಿ ಸೆಕೆಂಡಿನಲ್ಲಿ ಮುಕ್ತಿ-ಜೀವನ್ಮುಕ್ತಿಯ ಆಸ್ತಿ ತೆಗೆದುಕೊಂಡಿರಿ ಎಂದು. ಅಥವಾ 21 ವರ್ಷಗಳ ಆಸ್ತಿ ತೆಗೆದುಕೊಳ್ಳಿರಿ ಎಂದು ಹೇಳುತ್ತೀರಾ? ಅಂದಾಗ 12 ತಿಂಗಳಿನಲ್ಲಿ ಎಷ್ಟು ಸೆಕೆಂಡುಗಳು, ಎಷ್ಟು ದಿನಗಳಾಯಿತು? ಅಂದಮೇಲೆ ಎಲ್ಲರೂ ಸಂಪನ್ನರಾಗಿಬಿಡಬೇಕು. ಇನ್ನೂ ಸಮಯ ಬೇಕು ಎಂದು ಹೇಳುವಿರಾ? ಫಲಿತಾಂಶವೇನು? ಎಷ್ಟು ವರ್ಷಗಳು

ಬೇಕೆಂಬುದನ್ನಾದರೂ ತಿಳಿಸಿಬಿಡಿ ಇಲ್ಲದಿದ್ದರೆ ಇನ್ನೊಂದು ವರ್ಷ ಮುಗಿದರೂ ಸಹ ಇನ್ನೂ ಸಮಯ ಬೇಕು ಎಂಬ ಗೀತೆಯನ್ನು ಹಾಡುತ್ತೀರಿ.

ಈ ಬೇಕು, ಬೇಕು ಎಂಬ ಗೀತೆಯು ಎಷ್ಟು ಸಮಯದ್ದಾಗಿದೆ? ಗೀತೆಯೂ ಸಹ ಮೂರು ಅಥವಾ ಐದು ನಿಮಿಷಗಳು ಇರುತ್ತದೆಯಲ್ಲವೆ, ತಪಸ್ಯಾವರ್ಷದಲ್ಲಿ ಧೃಡಸಂಕಲ್ಪ ಮಾಡಿದಿರೋ ಅಥವಾ ಕೇವಲ ಸಂಕಲ್ಪ ಮಾಡಿದಿರೋ? ಧೃಡತೆಯ ಚಿಹ್ನೆಯಾಗಿದೆ- ಸಫಲತೆ. ಅಂದಮೇಲೆ ಈ ವರ್ಷದಲ್ಲಿ ಇನ್ನೂ ಹೆಚ್ಚಿನ ತಪಸ್ಸು ಬೇಕಲ್ಲವೆ ಅಥವಾ ಸೇವೆ ಮಾಡಬೇಕೋ? ಎರಡನ್ನೂ ಮಾಡಲು ಸಾಧ್ಯವಿಲ್ಲವೇ? ತಮ್ಮದು ಕರ್ಮಯೋಗಿ ಎಂಬ ಬಿರುದು ಅಲ್ಲವೇನು, ಕೇವಲ ಯೋಗಿಗಳಾಗಿದ್ದೀರಾ! ವಾಸ್ತವದಲ್ಲಿ ನೋಡಿದಾಗ ಯಾವುದರಲ್ಲಿ ಸ್ವ ಮತ್ತು ಸರ್ವರ ಸೇವೆಯು ಸಮಾವೇಶವಾಗಿರುವುದೊ ಅದಕ್ಕೆ ಸೇವೆಯೆಂದು ಹೇಳಲಾಗುತ್ತದೆ. ಅನ್ಯರ ಸೇವೆ ಮಾಡಿ ತನ್ನ ಸೇವೆಯಲ್ಲಿ ಉದಾಸೀನರಾಗಿಬಿಟ್ಟರೆ ವಾಸ್ತವದಲ್ಲಿ ಅದಕ್ಕೆ ಯಥಾರ್ಥ ಸೇವೆಯೆಂದು ಹೇಳುವುದಿಲ್ಲ. **ಸೇವೆಯ ಪರಿಭಾಷೆಯೇನೆಂದರೆ ಸೇವೆಗೆ ಪ್ರತ್ಯಕ್ಷಫಲ ಸಿಗುತ್ತದೆ. ಸೇವೆ ಎಂದರೆ ಮೇವಾ(ಫಲ) ಸೇವೆ ಮಾಡಿರಿ ಮೇವಾ ತಿನ್ನಿರಿ. ಒಂದುವೇಳೆ ಸ್ವಯಂನ ಕಡೆ ಉದಾಸೀನರಾದರೆ ಆ ಸೇವೆಯು ಪರಿಶ್ರಮವಾಗಿದೆ, ಖರ್ಚಿನದಾಗಿದೆ, ಸುಸ್ತಿನದಾಗಿದೆ ಎನಿಸುತ್ತದೆ ಆದರೆ ಪ್ರತ್ಯಕ್ಷಫಲದ ಸಫಲತೆಯಿರುವುದಿಲ್ಲ. ಮೊದಲು ಸ್ವಯಂಗೆ ಸಫಲತೆ, ಜೊತೆಯಲ್ಲಿ ಅನ್ಯರಿಗೂ ಸಫಲತೆಯ ಅನುಭೂತಿಯಾಗಲಿ, ಇವೆರಡೂ ಒಟ್ಟಿಗೆ ಇರಲಿ, ಸ್ವಯಂಗೆ ಸಫಲತೆಯ ಅನುಭವವಾಗಿ ಅನ್ಯರಿಗೆ ಆಗದಿದ್ದರೂ ಸಹ ಅದು ಯಥಾರ್ಥ ಸೇವೆಯಲ್ಲ ಮತ್ತು ಅನ್ಯರಿಗೆ ಸಫಲತೆಯಾಗಿ, ಸ್ವಯಂಗೆ ಆಗದಿದ್ದರೂ ಅದೂ ಯಥಾರ್ಥ ಸೇವೆಯಲ್ಲ.** ಅಂದಾಗ ಸೇವೆಯಲ್ಲಿ ಸೇವೆ ಮತ್ತು ಯೋಗ ಇವೆರಡೂ ಜೊತೆಜೊತೆಯಲ್ಲಿ ಏಕೆ ಇರುವುದಿಲ್ಲ? ಅದಕ್ಕೆ ಕಾರಣವೇನು? ಒಂದನ್ನು ನೋಡುತ್ತೀರೆಂದರೆ ಇನ್ನೊಂದು ಸಡಿಲವಾಗುತ್ತದೆ. ಇನ್ನೊಂದನ್ನು ನೋಡುತ್ತೀರೆಂದರೆ ಮೊದಲನೆಯದು ಸಡಿಲವಾಗುತ್ತದೆ. ಇದಕ್ಕೆ ಕಾರಣವೇನು? ಕಾರಣವೇನೆಂದರೆ ಸೇವೆಯ ಪ್ಲಾನ್ ಗಳನ್ನು ಬಹಳ ಚೆನ್ನಾಗಿ ಮಾಡುತ್ತೀರಿ ಆದರೆ ಪ್ಲೇನ್ (ಸ್ವಚ್ಛ) ಬುದ್ದಿಯವರಾಗಿ ಪ್ಲಾನ್ ಮಾಡುವುದಿಲ್ಲ. ಪ್ಲೇನ್ ಬುದ್ದಿ ಅರ್ಥಾತ್ ಸೇವೆ ಮಾಡುತ್ತಾ ಮತ್ತಾವುದೇ ಮಾತು ಬುದ್ಧಿಯನ್ನು ಸ್ಪರ್ಷಿಸದಿರಲಿ. ನಿಮಿತ್ತಭಾವ ಹಾಗೂ ನಿರ್ಮಾಣಭಾವವಿರಲಿ. ನಿರ್ಮಾಣ ಮಾಡುತ್ತಾ ನಿರ್ಮಾನ ಸ್ಥಿತಿಯ ಕೊರತೆಯಾಗಿಬಿಡುತ್ತದೆ ಆದ್ದರಿಂದ ನಿರ್ಮಾಣದ ಕಾರ್ಯವನ್ನು ಎಷ್ಟು ಸಫಲ ಮಾಡಬಯಸುತ್ತೀರೋ ಅಷ್ಟು ಸಫಲವಾಗುವುದಿಲ್ಲ. ಶುಭಭಾವನೆ ಹಾಗೂ ಶುಭಕಾಮನೆಯ ಬೀಜವೇ ಆಗಿದೆ ನಿಮಿತ್ತಭಾವ ಹಾಗೂ ನಿರ್ಮಾಣಭಾವ ಹದ್ದಿನ ಸ್ಥಾನಮಾನವಲ್ಲ ಆದರೆ ನಿರ್ಮಾಣರಾಗಿರಿ ಆದರಿಂದ ಸೇವೆಯ ಪ್ಲಾನ್ ಮಾಡುವುದಕ್ಕೆ ಮೊದಲು ಪ್ಲೇನ್ ಬುದ್ಧಿಯವರಾಗಿ ಮಾಡಿಕೊಳ್ಳುವುದು ಅತ್ಯವಶ್ಯಕವಾಗಿದೆ. ಇಲ್ಲದಿದ್ದರೆ ಪ್ಲೇನ್ ಬುದ್ಧಿಯ ಬದಲು ಒಂದುವೇಳೆ ಬುದ್ಧಿಯಲ್ಲಿ ಅನ್ಯ ಅಯತಾರ್ಥಭಾವದ ಕೊಳಕು ಬೆರಕೆಯಾಗಿ ಬಿಟ್ಟರೆ ಸೇವೆಯ ಯಾವ ಪ್ಲಾನ್ ಮಾಡಿರುತ್ತೀರೋ ಅದರಲ್ಲಿ ರತ್ನಗಳ ಜೊತೆಗೆ ಕಲ್ಲುಗಳ ಬೆರಕೆಯಾಗಿಬಿಡುತ್ತದೆ. ರತ್ನಗಳು ಮತ್ತು ಕಲ್ಲುಗಳು ಬೆರಕೆಯಾಗಿಬಿಡುತ್ತವೆ. ಒಂಭತ್ತು ರತ್ನಗಳನ್ನು ಜೋಡಿಸಿದಾಗ ಒಂದು ಕಲ್ಲನ್ನು ಬೆರೆಸುತ್ತೀರಾ? ಒಂದು ವಸ್ತುವಿನಲ್ಲಿ ಒಂಬತ್ತು ಅಪ್ಪಟವಾಗಿದ್ದು ಇನ್ನೊಂದು ತಾತ್ಕಾಲಿಕವಾಗಿದ್ದರೆ ಅದರ ಬೆಲೆ ಏನಾಗುವುದು? ಅದನ್ನು ತೆಗೆದುಕೊಳ್ಳುವವರೂ ಸಹ ಈ ಒಂಬತ್ತಾದರೂ ಅಪ್ಪಟವೇ ಅಥವಾ ಬೆರಿಕೆಯ ಎಂದು ಯೋಚಿಸುತ್ತಾರೆ ಆದ್ದರಿಂದ ಸೇವೆಯ ಪ್ಲಾನ್ ಜೊತೆ ಜೊತೆಗೆ ಮೊದಲು ಪ್ಲೇನ್ ಬುದ್ಧಿಯ ಗಮನವಿಟ್ಟುಕೊಳ್ಳಿರಿ. ಒಂದು ವೇಳೆ ಪ್ಲೇನ್ ಬುದ್ಧಿ ಇದ್ದರೆ ಸೇವೆಯ ಪ್ಲಾನ್ ಅಷ್ಟು ದೊಡ್ಡದಿಲ್ಲದಿದ್ದರೂ ಪ್ಲೇನ್ ಬುದ್ಧಿಯವರಿಗೆ ನಷ್ಟವಿಲ್ಲ, ಹೊರೆಯಿಲ್ಲ. ಸೇವೆಯ ಲಾಭವು ಕಡಿಮೆ ಇರಬಹುದು ಆದರೆ ನಷ್ಟವಂತೂ ಇಲ್ಲ ಎಂದು ಹೇಳುತ್ತಾರಲ್ಲವೆ. ಬೆರೆಕೆಯಾದ ಬುದ್ಧಿಯಲ್ಲಿ ನಷ್ಟವಿದೆ. ಆದ್ದರಿಂದ ಈ ವರ್ಷವನ್ನು ತಪಸ್ಯಾ ವರ್ಷವನ್ನಾಗಿ ನೋಡುತ್ತೀರಾ? ಸೇವೆಯಲ್ಲಂತೂ ಕೆಳಗಿನ ಸ್ಥಿತಿಗೆ ಬಂದುಬಿಡುತ್ತೇವೆ ಎಂದು ಹೇಳುತ್ತೀರಿ. ಅಂದಮೇಲೆ ಏನು ಮಾಡುವಿರಿ ಕೇವಲ ತಪಸ್ಸನ್ನೇ ಮಾಡುವಿರಾ?

ಯಾವಾಗ ಸ್ವಯಂ ಸಂಪನ್ನರಾಗುವಿರೋ ಆಗ ವಿಶ್ವಪರಿವರ್ತನೆಯ ಕಾರ್ಯವೂ ಸಂಪನ್ನವಾಗುವುದು. ತಮ್ಮೆಲ್ಲರ ಸಂಪನ್ನತೆಯ ಕೊರತೆಯ ಕಾರಣ ಶ್ವಪರಿವರ್ತನಾ ಕಾರ್ಯವು ಸಂಪನ್ನವಾಗದೇ ನಿಂತಿದೆ. ಪ್ರಕೃತಿಯು ದಾಸಿಯಾಗಿ ತಮ್ಮ

ಸೇವೆಗಾಗಿ ನಿರೀಕ್ಷಿಸುತ್ತಿದೆ- ಬ್ರಾಹ್ಮಣ ಆತ್ಮರು ಬ್ರಾಹ್ಮಣ ಸೋ ಪರಿಶ್ತಾ ಮತ್ತು ಪರಿಶ್ತಾ ಸೋ ದೇವತೆಗಳಾಗಲಿ ಆಗ ನಾವು ಹೃದಯಪೂರ್ವಕವಾಗಿ ಅವರ ಸೇವೆ ಮಾಡೋಣವೆಂದು. ಏಕೆಂದರೆ ಫರಿಶ್ತೆಗಳಾಗದೇ ದೇವತೆಗಳಾಗಲು ಸಾಧ್ಯವಿಲ್ಲ. ಬ್ರಾಹ್ಮಣರಿಂದ ಫರಿಶ್ತೆ ಆಗಲೇಬೇಕಾಗುತ್ತದೆ. ಮತ್ತು **ಫರಿಶ್ತಾ ಎಂಬುದರ ಅರ್ಥವೇ ಆಗಿದೆ- ಯಾರಿಗೆ ಹಳೆಯ ಪ್ರಪಂಚ, ಹಳೆಯ ಸಂಸ್ಕಾರ. ಹಳೆಯ ದೇಹದೊಂದಿಗೆ, ವೃತ್ತಿಯಿಂದಲೂ ಸಹ ಯಾವುದೇ ಆಕರ್ಷಣೆಯಲ್ಲಿ ರಿಶ್ತೆ(ಸಂಬಂಧ)ಯಿಲ್ಲ. ಈ ಮೂರರಲ್ಲಿಯೂ ವಾಸ್ ಆಗಬೇಕು, ಮೂರರಿಂದಲೂ ಮುಕ್ತರಾಗಬೇಕು.** ವಾಸ್ತವದಲ್ಲಿ ಡ್ರಾಮಾದಲ್ಲಿ ಮೊದಲು ಮುಕ್ತಿಯ ವಾರಸತ್ವ ನಂತರ ಜೀವನ್ಮುಕ್ತಿಯ ವಾರಸತ್ವವಿದೆ. ಮುಕ್ತಿಧಾಮವನ್ನು ಬಿಟ್ಟು ನಾವು ಜೀವನ್ಮುಕ್ತಿಯಲ್ಲಿ ಹೋಗಲು ಸಾಧ್ಯವಿಲ್ಲ. ಅಂದಮೇಲೆ ಫರಿಶ್ತಾ ಅರ್ಥಾತ್ ಮುಕ್ತ ಮತ್ತು ಮುಕ್ತಫರಿಶ್ತೆಗಳೇ ನಂತರ ಜೀವನ್ಮುಕ್ತ ದೇವತೆಗಳಾಗುವರು. ಅಂದಾಗ ಎಷ್ಟು ಪರ್ಸೆಂಟ್ ಫರಿಶ್ತೆಗಳಾಗಿದ್ದೀರಿ? ಅಥವಾ ಬ್ರಾಹ್ಮಣರಾಗುವುದರಲ್ಲಿಯೇ ಖುಷಿಯಾಗಿದ್ದೀರಾ? *ಫರಿಶ್ತೆಗಳಾಗುವುದು ಎಂದರೆ ಅವ್ಯಕ್ತ ಫರಿಶ್ತಾ ಸ್ವರೂಪ ಬ್ರಹ್ಮಾತಂದೆಯೊಂದಿಗೆ ಪ್ರೀತಿಯಿದೆ ಎಂದರ್ಥ. ಯಾರಿಗೆ ಫರಿಶ್ತಾ ಸ್ಥಿತಿಯ ಮೇಲೆ ಪ್ರೀತಿಯಿಲ್ಲವೋ ಅವರಿಗೆ ಬ್ರಹ್ಮಾತಂದೆಯೊಂದಿಗೆ ಪ್ರೀತಿಯಿದೆ ಎಂಬುದನ್ನು ತಂದೆಯು ಒಪ್ಪುವುದಿಲ್ಲ. ಪ್ರೀತಿಯ ಅರ್ಥವೇ ಆಗಿದೆ - ಸಮಾನರಾಗುವುದು. ಬ್ರಹ್ಮಾತಂದೆಯು ಫರಿಶ್ತೆಯಾಗಿದ್ದಾರಲ್ಲವೆ. ಫರಿಶ್ತೆಯಾಗಿ ತಮ್ಮೆಲ್ಲರನ್ನೂ ಫರಿಶ್ತೆಗಳನ್ನಾಗಿ ಮಾಡಲು ಫರಿಶ್ತೆಗಳ ಪ್ರಪಂಚದಲ್ಲಿ ಕಾಯುತ್ತಿದ್ದಾರೆ. ಕೇವಲ ಬ್ರಹ್ಮಾತಂದೆಯೊಂದಿಗೆ ಬಹಳ ಪ್ರೀತಿಯಿದೆ. ಎಷ್ಟು ವರ್ಣನೆ ಮಾಡುವುದು ಎಂದು ಬಾಯಿಂದ ಹೇಳಬೇಡಿ. ಬ್ರಹ್ಮಾತಂದೆಯು ಕೇವಲ ಹೇಳುವುದರಿಂದ ಖುಷಿಪಡುವುದಿಲ್ಲ. ಅವರ ಸಮಾನರಾಗಿ ತೋರಿಸಿ ಆಗ ಖುಷಿಪಡುತ್ತಾರೆ. ಭಕ್ತರು ನಮಗಿಂತಲೂ ಚೆನ್ನಾಗಿ ಹೇಳುತ್ತಾರೆ. ಎಷ್ಟು ಪ್ರೀತಿಯ ಹಾಡುಗಳನ್ನು ಹಾಡುತ್ತಾರೆಂದರೆ ಅನೇಕರನ್ನು ಖುಷಿಪಡಿಸುತ್ತಾರೆ ಮತ್ತು ಅಳುವಂತೆಯೂ ಮಾಡುತ್ತಾರೆ. ಅವರೆಲ್ಲರೂ ಕೇವಲ ಹೇಳುವವರಾಗಿದ್ದಾರೆ, ತಾವು ಆಗುವವರಾಗಿದ್ದೀರಿ. ಒಂದುವೇಳೆ ಕೇವಲ ಹೇಳುತ್ತಾ ಇರುತ್ತೀರೆಂದರೆ ತಿಳಿದುಕೊಳ್ಳಿ. ಈಗಲೂ ಭಕ್ತಿಯ ಅಂಶವು ಉಳಿದುಕೊಂಡಿದೆ. ಅವರಿಗೆ ಜ್ಞಾನಿ ಯೋಗಿ ಆತ್ಮರೆಂದು ಹೇಳುವುದಿಲ್ಲ. ಅದಕ್ಕೆ ಬದಲಾಗಿ ಭಕ್ತಯೋಗಿ ಆತ್ಮರೆಂದು ಹೇಳಲಾಗುತ್ತದೆ.* ಈಗ ಏನು ಮಾಡುವಿರಿ? ಯಾವುದಾದರೂ ನವೀನತೆಯನ್ನು ತೋರಿಸುತ್ತೀರಾ! ಅಥವಾ ಈ ವರ್ಷ ಮಾಡಿದ್ದನ್ನೇ ಮಾಡುತ್ತೀರಾ? *ಇಂತಹ ಸಮಯವೂ ಬರುವುದು ಯಾವಾಗ ಬಾಪ್‌ದಾದಾ ಯಾರು ಮಾಡುವವರಿದ್ದಾರೆಯೋ, ಆಗುವವರಿದ್ದಾರೆಯೋ, ಕೇವಲ ಹೇಳುವವರಲ್ಲವೋ ಕೇವಲ ಅವರೊಂದಿಗೇ ಮಿಲನ ಮಾಡುತ್ತೇವೆ. ಈಗಂತೂ ಎಲ್ಲರಿಗೂ ಅನುಮತಿ ಕೊಡುತ್ತೇವೆ. ಭಾವನೆಯವರು ಬರಲಿ, ಜ್ಞಾನಿ-ಯೋಗಿ ಆತ್ಮರು ಮಿಲನ ಮಾಡಲಿ ಎಂದು ಹೇಳುತ್ತೇವೆ ಆದರೆ ಮುಂದೆ ಸಮಯವು ಪರಿವರ್ತನೆ ಆಗಲೇಬೇಕಾಗಿದೆ. ಆದ್ದರಿಂದ ತಮ್ಮ ಮೇಲೆ ಇನ್ನೂ ಹತ್ತುಪಟ್ಟು ಅಂಡರ್‌ಲೈನ್ ಮಾಡಿಕೊಂಡು ಹೇಗಾಗುವುದು. ಹೀಗೇಕೆ ಮಾಡಿದೆವು ಎಂಬುದನ್ನು ನೋಡಿಕೊಳ್ಳಿರಿ. ಒಂದುವೇಳೆ ತಾವು ಪುರುಷಾರ್ಥದಲ್ಲಿ ಕಠಿಣವಾಗಿ ನಿಲ್ಲುವುದಿಲ್ಲವೆಂದರೆ ತಂದೆಯೇ ಕಠಿಣವಾಗಬೇಕಾಗುತ್ತದೆ. ಈಗಂತೂ ತಂದೆಯ ಪ್ರೀತಿ ಸ್ವರೂಪದಿಂದ ನಡೆಯುತ್ತಿದ್ದೀರಿ. ಬೆಳೆಯುತ್ತಿದ್ದೀರಿ ಆದರೆ ಸದ್ಗುರುವಿನ ರೂಪವು ಧರ್ಮರಾಜನದಲ್ಲ, ಸದ್ಗುರುವಿನ ಅಜ್ಞೆಯು ಶಿರಸಾವಹಿಸಿ ಮಾಡಬೇಕೆಂದು ಗಾಯನವಿದೆ. ಈಗಂತೂ ಬಾಪ್‌ದಾದಾ ಮಧುರ ಮಕ್ಕಳೇ, ಪ್ರಿಯಮಕ್ಕಳೇ ಎಂದು ಹೇಳಿ ನಡೆಸುತ್ತಿದ್ದಾರೆ.* ಒಂದುವೇಳೆ ಪ್ರೀತಿಯಿದೆ. ಮಿಲನದ ಬಾಯಾರಿಕೆಯಿದೆ ಎನ್ನುವುದಾದರೆ ಸಮಾನರಾಗಿ ಮಿಲನ ಮಾಡಿರಿ, ಮಹಾನ್ ಅಂತರದಲ್ಲಿ ಮಿಲನ ಮಾಡಬೇಡಿ. ಸಮಾನರಾಗಿ ಮಿಲನ ಮಾಡುವುದರಲ್ಲಿ ಬಹಳ ಆನಂದವಿದೆ. ಈ ಆನಂದವೇ ಭಿನ್ನವಾಗಿದೆ. ಒಳ್ಳೆಯದು- ತಂದೆಯೊಂದಿಗೆ ಮಿಲನ ಮಾಡಿದಿರಿ. ದೃಷ್ಟಿ ತೆಗೆದುಕೊಂಡಿರಿ ಮತ್ತೆ ಅಲ್ಲಿ ಹೋದ ಮೇಲೆ ಯಾವುದೋ ನಿರ್ಬಲತೆ ಬಂದುಬಿಟ್ಟಿತು. ಶಕ್ತಿ ಸಿಕ್ಕಿತು ಮತ್ತು ಕೆಲಸದಲ್ಲಿ ತಂದೆವು. ಒಂದೆರಡು ಬಾರಿ ವಿಜಯಿಗಳೂ ಆದೆವು ನಂತರ ಬಲಹೀನರಾಗಿಬಿಟ್ಟೆವು ಎಂಬುದಲ್ಲ. ಇದು ತಮ್ಮ ಪ್ರಕಾರದ ಮಿಲನವಾಗಿದೆ ಆದರೆ ಯಥಾರ್ಥ ಪ್ರೀತಿ, ಯಥಾರ್ಥ ಮಿಲನವು ಇದಕ್ಕಿಂತಲೂ ಬಹಳ ಉನ್ನತವಾಗಿದೆ. ಬಹಳ-ಬಹಳ ಪ್ರಿಯವಾಗಿದೆ ಎಂಬುದರ ಅನುಭವ ಮಾಡಿರಿ, ತಿಳಿಯಿತೆ-

ಸದ್ಗುರುವಿನ ಆಜ್ಞೆಯನ್ನು ಯಾರೂ ಒಪ್ಪಲಿಲ್ಲವೆಂದರೆ ಇವರು ಸದ್ಗುರು ಅಲ್ಲವೆ, ತಂದೆಯ ಮುಂದೆ ಮಕ್ಕಳ ತುಂಟಾಟವು ನಡೆಯುತ್ತದೆ. ಒಂದುವೇಳೆ ತಂದೆಯೊಂದಿಗೆ ಸತ್ಯಪ್ರೀತಿಯಿದೆ ಎನ್ನುವುದಾದರೆ ಈ ವರ್ಷದಲ್ಲಿ ಫರಿಶ್ತಾ ಸಮಾನರಾಗಿ ತೋರಿಸಿ. ಈಗ ಇಷ್ಟೊಂದು ಮಂದಿ ಮಿಲನ ಮಾಡಲು ಬಂದಿದ್ದೀರಿ. ಇದು ಬಹಳ ಚೆನ್ನಾಗಿದೆ ಆದರೆ ಇನ್ನೂ ಚೆನ್ನಾಗಿ ಮಾಡಬೇಕಾಗಿದೆ. ಪ್ರೀತಿ ಮಾಡುವುದು ಮತ್ತು ಪ್ರೀತಿಯನ್ನು ನಿಭಾಯಿಸುವುದರಲ್ಲಿ ಅಂತರವಿದೆ. **ಪ್ರೀತಿ ಮಾಡುವವರಂತೂ ಎಲ್ಲರೂ ಆಗಿದ್ದೀರಿ. ಒಂದುವೇಳೆ ಪ್ರೀತಿಯಿಲ್ಲದಿದ್ದರೆ ಇಷ್ಟೊಂದು ಮಂದಿ ಏಕೆ ಬರುತ್ತೀರಿ ಆದರೆ ಪ್ರೀತಿ ಮಾಡುವುದು ಮತ್ತು ನಿಭಾಯಿಸುವುದರಲ್ಲಿ ಅಂತರವಾಗಿಬಿಡುತ್ತದೆ. ಪ್ರೀತಿ ಮಾಡುವವರು ಅನೇಕರಿರುತ್ತಾರೆ ಆದರೆ ನಿಭಾಯಿಸುವವರು ಎಷ್ಟು ಮಂದಿ ಇರುತ್ತಾರೆ! ಅಂದಮೇಲೆ ತಾವು ನಿಭಾಯಿಸುವವರಾಗಿದ್ದೀರಾ? ನಿಭಾಯಿಸುವವರು ಇನ್ನೂ ಬೇಕು, ಬೇಕು ಎಂದು ಹೇಳುವುದಿಲ್ಲ.** ಕೇವಲ ಬಾಯಿಂದಲ್ಲ, ಎಲ್ಲವೂ ಪ್ರತ್ಯಕ್ಷವಾಗಿದೆಯೇ? ತಿಳಿಸಿದೆವಲ್ಲವೆ! ತಪಸ್ಸಿನ ಚಾರ್ಟ್‌ನಲ್ಲಿಯೂ ತಮಗೆ ಅಂಕಗಳು, ಸರ್ಟಿಫಿಕೇಟ್ ಕೊಟ್ಟುಕೊಳ್ಳುವವರು ಅನೇಕರಿದ್ದಾರೆ ಆದರೆ ಸರ್ವರ ಸಂತುಷ್ಟತೆಯ ಸರ್ಟಿಫಿಕೇಟ್ ಕೆಲಕೆಲವರಿಗೇ ಪ್ರಾಪ್ತಿಯಾಗುತ್ತದೆ. ಚಾರ್ಟನ್ನು ಇಡುವವರೂ ಅನೇಕರಿದ್ದಾರೆ. ತಮಗೆ ತಾವೇ ಬಹಳ ಚೆನ್ನಾಗಿ ಇದ್ದೇವೆ ಎಂದು ಸರ್ಟಿಫಿಕೇಟ್ ಕೊಟ್ಟುಕೊಳ್ಳುವವರು ಅನೇಕರಿದ್ದಾರೆ. ಅನೇಕರಲ್ಲ ಆದರೆ ಕೆಲವರಿದ್ದಾರೆ. ಎರಡನೇ ನಂಬರಿನವರು ಅನೇಕರಿದ್ದಾರೆ ಆದರೆ ಎಲ್ಲರ ಬಾಯಿಂದ ಇದೇ ಹೊರಬರಲಿ- ಹೌದು, ಇವರು ನಂಬರ್‌ವನ್ ಇದ್ದಾರೆ ಎಂದು. ಎಲ್ಲರ ಹೃದಯದಿಂದ ಈ ಆಶೀರ್ವಾದಗಳ ಸರ್ಟಿಫಿಕೇಟ್ ಸಿಗಲಿ, ಅವರಿಗೇ ನಂಬರ್‌ವನ್ ಎಂದು ಹೇಳಲಾಗುವುದು. ಕೆಲವು ಮಕ್ಕಳು ಹೇಳುತ್ತಾರೆ- ನಾವಂತೂ ಸರಿಯಾಗಿದ್ದೇವೆ ಆದರೆ ನಮ್ಮೊಂದಿಗೆ ಕೆಲಕೆಲವು ಆತ್ಮರ ಲೆಕ್ಕಾಚಾರವಿದೆ. ಎಷ್ಟಾದರೂ ಅವರನ್ನು ಸಂತುಷ್ಟಪಡಿಸಲಿ ಆದರೆ ಅವರು ಸಂತುಷ್ಟರಾಗುವುದಿಲ್ಲ ಎಂದು ಹೇಳುತ್ತಾರೆ. ಬಾಪ್‌ದಾದಾ ಮೊದಲೂ ಹೇಳಿದ್ದೆವು- ಒಂದುವೇಳೆ ಇಂತಹ ಯಾವುದಾದರೂ ಕಠಿಣ ಲೆಕ್ಕಾಚಾರವಿದ್ದರೂ ಸಹ ಕೊನೆಪಕ್ಷ 95% ಆದರೂ ಸರ್ಟಿಫಿಕೇಟ್ ಸಿಗಬೇಕು. 5% ಕಠಿಣ ಲೆಕ್ಕಾಚಾರವಿರಬಹುದು. ಭಲೆ ಅದು ಹೋಗಲಿ ಆದರೆ 95% ಆದರೂ ಹೃದಯದಿಂದ ಆಶೀರ್ವಾದಗಳು ಸಿಗಲಿ. ಕೆಲವರು ಈ ರೀತಿ ಹೇಳುತ್ತಾರೆ- ಎಲ್ಲರಿಂದ ಸಂತುಷ್ಟರಾಗಿರುವವರು ಯಾರಿದ್ದಾರೆ? ಈ ರೀತಿಯಂತೂ ಯಾರೊಬ್ಬರೂ ಇಲ್ಲ ಎಂದು ಹೇಳುತ್ತಾರೆ. ಹಿರಿಯರ ಪ್ರತಿಯೂ ಯೋಚಿಸುತ್ತಾರೆ. ಇವರಿಂದಲೇ ಬೇಸರಪಟ್ಟಿದ್ದಾರೆ. ಇನ್ನು ನಮ್ಮಿಂದ ಬೇಸರವಾದರೆ ಅದೇನು ದೊಡ್ಡ ಮಾತು ಎಂದು ಯೋಚಿಸುತ್ತಾರೆ. ಆದರೆ ಅವರಿಂದ 95% ಹೃದಯದಿಂದ ರಾಜಿಯಾಗಿದ್ದಾರೆ. ದೊಡ್ಡವರ ಮಾತೇ ಬೇರೆಯಾಗಿದೆ. ಹಿರಿಯರು ಕೆಲವೊಮ್ಮೆ ಜಡ್ಜ್ ಆಗಲೇಬೇಕಾಗುತ್ತದೆ ಅಂದಾಗ ಇಬ್ಬರಲ್ಲಿ ಒಬ್ಬರ ಮಾತನ್ನು ಹೌದು ಎನ್ನಬೇಕಾಗುತ್ತದೆ. ಆಗ ಅವರು ನಮ್ಮ ಹಿರಿಯರು ಬಹಳ ಒಳ್ಳೆಯವರೆಂದು ಹೇಳತೊಡಗುತ್ತಾರೆ ಮತ್ತು ಯಾರಿಗೆ ಇಲ್ಲ ಎನ್ನುವರೋ ಅವರು ನಮ್ಮ ಹಿರಿಯರೂ ಒಳ್ಳೆಯವರಲ್ಲ ಎಂದು ಹೇಳತೊಡಗುತ್ತಾರೆ. ಅಂದಮೇಲೆ ಜಡ್ಜ್ ಆದವರು ಒಬ್ಬರನ್ನು ಹೌದು ಎನ್ನಲೇಬೇಕಾಗುವುದು. ಅದು ಬೇರೆ ಮಾತಾಗಿದೆ ಆದರೆ ಹೃದಯದ ತಪಸ್ಸು, ಹೃದಯದ ಪ್ರೀತಿ ನಿಮಿತ್ತಭಾವ, ಶುಭಭಾವ, ಈ ಸರ್ಟಿಫಿಕೇಟನ್ನು ಮುಂದಿಟ್ಟುಕೊಳ್ಳಿರಿ. ಹಿರಿಯರಿಂದಲೂ ಸಂತುಷ್ಟರಾಗಿಲ್ಲ ಆದ್ದರಿಂದ ನಾವಂತೂ ಪಾಸ್ ಆಗಿ ಬಿಡುತ್ತೇವೆ. ಎಂದು ಇದನ್ನು ಕಾಪಿ ಮಾಡಬೇಡಿ ಒಂದು ವೇಳೆ 95% ಸಂತುಷ್ಟವಾಗಿದ್ದರೆ ನಂಬರ್ ಸಿಕ್ಕಿಬಿಡುವುದು ತಿಳಿಯಿತೆ. ಒಳ್ಳೆಯದು -

**ಸರ್ವಜೀವನ್ಮುಕ್ತಿಯ ನಾಲ್ಕಾರು ಕಡೆಯ ಆದಿಪಿತನ ಆದಿರಚನೆ, ಡೈರೆಕ್ಟ್ ರಚನೆಯಾದ ಶ್ರೇಷ್ಠಾತ್ಮರು, ಜನ್ಮಗಳವರೆಗೆ ಪ್ರಾಪ್ತಿ ಮಾಡಿಕೊಳ್ಳುವಂತಹ ಆತ್ಮರು, ಸರ್ವಬ್ರಾಹ್ಮಣರಿಂದ ಫರಿಶ್ತೆಗಳು, ಫರಿಶ್ತೆಗಳಿಂದ ದೇವಾತ್ಮರಾಗುವಂತಹ ಅಧಿಕಾರಿ ಆತ್ಮರು. ಸದಾ ಪ್ಲೇನ್ ಬುದ್ಧಿಯವರಾಗಿ ಆಸ್ತಿಯನ್ನು (ವಾರಸತ್ವ), ಅನೇಕ ಸೇವೆಯ ಪ್ಲಾನ್‌ನಲ್ಲಿ ಸಫಲತೆಯನ್ನು ಪ್ರಾಪ್ತಿ ಮಾಡಿಕೊಳ್ಳುವಂತಹ ಆತ್ಮರು, ತಂದೆಯೊಂದಿಗೆ ಸತ್ಯ ಸ್ನೇಹ, ಸತ್ಯಪ್ರೀತಿಯನ್ನು ನಿಭಾಯಿಸುವಂತಹ ಸರ್ವ ಸಮೀಪ ಆತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗು ನಮಸ್ತೆ.**

ರಿವೈಸ್ ಕೋರ್ಸ್ 08-04-1992.

***ಬ್ರಹ್ಮಾತಂದೆಯೊಂದಿಗಿನ ಪ್ರೀತಿಯ ಚಿಹ್ನೆಯಾಗಿದೆ- ಅವ್ಯಕ್ತ ಫರಿಶ್ತೆಯಾಗುವುದು***

ಬ್ರಾಹ್ಮಣತ್ಮರಾದ ನೀವೇ ಡೈರೆಕ್ಟ್ ಶಿವವಂಶಿ ಅಥವಾ ಆದಿದೇವ ಬ್ರಹ್ಮನ ರಚನೆಯೆಂದು ಕರೆಯಿಸಿಕೊಳ್ಳುತ್ತೀರಿ. ದ್ವಾಪರದಲ್ಲಿ ಭಕ್ತಿಯನ್ನು ಕೂಡ ಶಿವನ ಪೂಜೆಯಿಂದಲೇ ಪ್ರಾರಂಭ ಮಾಡುತ್ತೀರಿ. ಡೈರೆಕ್ಟ್ ಆತ್ಮರಾದ ನಿಮಗೆ ಅನೇಕ ಜನ್ಮಗಳಿಗಾಗಿ ಜೀವನ್ಮುಕ್ತಿಯ ವಾರಸತ್ವವು ಸಿಗುತ್ತದೆ. ನೀವು ಸತೋಪ್ರಧಾನವಾಗಿದ್ದಾಗ ಪ್ರಕೃತಿಯನ್ನು ಕೂಡ ಸತೋ ಪ್ರಧಾನವಾಗಿ ಅನುಭವ ಮಾಡಿಕೊಳ್ಳುತ್ತೀರಿ. ಸ್ವಯಂ ಮತ್ತು ಸರ್ವರ ಸೇವೆ ಸಮಾವೇಶವಾಗಿರುವುದನ್ನೇ ಯಥಾರ್ಥ ಸೇವೆ ಎಂದು ಕರೆಯುತ್ತಾರೆ. ಕೇವಲ ಸ್ವಯಂಸೇವೆ ಇದ್ದರೂ ಅಥವಾ ಕೇವಲ ಇತರರ ಸೇವೆಯೇ ಇದ್ದರೂ ಅದನ್ನು ಯಥಾರ್ಥ ಸೇವೆ ಎಂದು ಕರೆಯುವುದಿಲ್ಲ. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಪರಮಾತ್ಮ ನನ್ನ ತಂದೆ.

1. ಬ್ರಾಹ್ಮಣಾತ್ಮನಾದ ನಾನು ಕಲ್ಪವೃಕ್ಷದಲ್ಲಿ ಬೀಜಕ್ಕೆ ಸಮೀಪವಾಗಿ, ಬುಡದಲ್ಲಿ ಇರುವ ಪ್ರತ್ಯಕ್ಷ ಡೈರೆಕ್ಟರ್ ರಚನೆಯಾಗಿದ್ದೇನೆ.

2. ನಾನು ವೃಕ್ಷದ ಬುಡದಲ್ಲಿ ಮತ್ತು ದೇವತಾರೂಪದಲ್ಲಿ ವೃಕ್ಷದ ಕಾಂಡದಲ್ಲಿ ಇದ್ದೇನೆ.

3. ಡೈರೆಕ್ಟ್ ರಚನೆಯಾದ ನನಗೆ ಅರ್ಧಕಲ್ಪದ ಜೀವನ್ಮುಕ್ತಿಯ ವಾರಸತ್ವ ಲಭಿಸಿದೆ.

4. ನಾನು ಡೈರೆಕ್ಟ ಪರಮಾತ್ಮನ ರಚನೆ ಎಂಬ ನಶೆಯನ್ನು ಸದಾ ಮತ್ತು ಸಂಪೂರ್ಣ ಶಾತ ಉಳಿಸಿಕೊಂಡಿದ್ದೇನೆ.

5. ನಾನು ಸ್ವಸೇವೆ ಮತ್ತು ಇತರರ ಸೇವೆಯನ್ನು ಮಾಡಿ ಪ್ರತ್ಯಕ್ಷ ಫಲವಾಗಿ ಸಫಲತೆಯನ್ನು ಪಡೆದಿದ್ದೇನೆ.

6. ನಾನು ಸ್ವಚ್ಛವಾದ ಬುದ್ಧಿಯಿಂದ ಅರ್ಥಾತ್ ನಿಮಿತ್ತ ಭಾವ ನಿರ್ಮಾಣ ಭಾವದಿಂದ ಸೇವೆಯ ಪ್ಲಾನನ್ನು ತಯಾರು ಮಾಡಿ ಸಫಲತೆಯನ್ನು ಪಡೆದಿದ್ದೇನೆ.

7. ನಾನು ಸಂಪನ್ನವಾಗಿ ತಯಾರಾಗಿ ವಿಶ್ವ ಪರಿವರ್ತನಾ ಕಾರ್ಯವನ್ನು ಸಂಪನ್ನ ಮಾಡಿದ್ದೇನೆ.

8. ನಾನು ಹಳೆಯ ಪ್ರಪಂಚ, ಹಳೆಯ ಸಂಸ್ಕಾರಗಳು, ಹಳೆಯ ದೇಹದ ಯಾವ ಆಕರ್ಷಣೆಯ ಬಂಧನವಿಲ್ಲದ ಫರಿಶ್ತಾ.

9. ನಾನು ಬ್ರಾಹ್ಮಣರಿಂದ  ಫರಿಶ್ತಾ, ಫರಿಶ್ತಾನಿಂದ ದೇವತೆಯಾಗಿದ್ದೇನೆ.

10. ನಾನು ತಂದೆಯ ಮೇಲಿನ ಪ್ರೀತಿಗೆ ಬದಲಾಗಿ ತಂದೆಯ ಸಮಾನವಾಗಿ ತಯಾರಾಗಿ ತೋರಿಸಿದ್ದೇನೆ.

11. ನಾನು ಸರ್ವರಿಂದ ಸಂತುಷ್ಟತೆಯ ಸರ್ಟಿಫಿಕೇಟ್ ಅನ್ನು ಪಡೆದು ಎಲ್ಲರ ಮನಸ್ಸಿನಿಂದ ಆಶೀರ್ವಾದಗಳ ಸರ್ಟಿಫಿಕೇಟ್ ಅನ್ನು ಪಡೆದಿರುವ ನಂಬರ್ ವನ್ ಮಗುವಾಗಿದ್ದೇನೆ.

12. ನಾನು ಹೃದಯದ ತಪಸ್ಸು, ಹೃದಯದ ಪ್ರೀತಿ, ನಿಮಿತ್ತ ಭಾವ, ನಿರ್ಮಾನ ಭಾವ ಎಂಬ ಸರ್ಟಿಫಿಕೇಟ್ ಅನ್ನು ಪಡೆದಿದ್ದೇನೆ.